ಬಾ.ರಂ. ಸುರೇಶ್, ಶಿವಮೊಗ್ಗ

ಇತರ ಹೆಣ್ಣುಗಳನ್ನು ಕಣ್ಣೆತ್ತಿ ನೋಡದ ಏಕಪತ್ನೀವ್ರತಸ್ಥನಾದ ನನ್ನನ್ನು ಸತಿ ಅನುಮಾನಿಸುವಳಲ್ಲ?



ಕಣ್ಣೆತ್ತಿ ನೋಡಲ್ಲ ಸರಿ; ಗಿಡ್ಡ ಸುಂದರಿಯರನ್ನು ಕಣ್ಣೆಳಿಸಿಯೇ ನೋಡುವಿರಂತಲ್ಲ!

ಎನ್.ವಿ. ಶ್ರೀನಿವಾಸ್, ಮೈಸೂರು

ವಿವಾಹಿತನ ತಲೆ ಬೋಳಾಗಲು 'ರಾಜ' ಕಾರಣವೋ 'ರಾಣಿ' ಕಾರಣವೋ?

ಸದನ ಸಂಪುಟ ವಿಸ್ತರಣೆಯಿಂದಾದ ಖೋತಾ ಬಜೆಟ್ ಕಾರಣ.

ಜಯಶ್ರೀ, ಬೆಂಗಳೂರು

ರೈತನ, ಆಟೋದವನ ಮಕ್ಕಳು ಅಧಿಕಾರಿ, ವೈದ್ಯ, ಎಂಜಿನಿಯರ್ ಆಗುವರು. ರಾಜಕಾರಣಿಯ ಮಕ್ಕಳು ರಾಜಕಾರಣಿಯೇ ಆಗುವರಲ್ಲ?

ಶ್ರಮ ಕಂಡ ಮಕ್ಕಳು ಕ್ರಮ ಕಂಡುಕೊಳ್ಳುತ್ತಾರೆ. ಅಕ್ರಮ ಕಂಡವರು ಅಕ್ರಮಕ್ಕೇ ಜೋತುಬೀಳುತ್ತಾರೆ.

ಬೂಕನಕೆರೆ ವಿಜೇಂದ್ರ, ಮೈಸೂರು

ತಾಳ್ಮೆ ಇಲ್ಲದ ಹುಡುಗಿಯರನ್ನು ಏನೆಂದು ಕರೆಯಬಹುದು?



ಮಿಸ್–ಟೆಂಪರ್.

ಬಿ. ಚಂದ್ರೇಗೌಡ, ಬೆಂಗಳೂರು

ಸತ್ತವರನ್ನು ಅಸ್ತಂಗತರಾದರು ಎನ್ನುವುದು ಸರಿಯೆ?

ಅದೇ ಸರಿ. 'ಹಸ್ತಂಗತ'ರಾದರು ಎಂದರೆ ಕಾಂಗ್ರೆಸ್ ಸೇರಿದರು ಎಂದರ್ಥ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮನಸೇ ಕನ್ನಡಿ; ನಗುವೇ ಮೇಕಪ್. ಅಳುವೇ?

ಮೇಕಪ್ ರಿಮೂವರ್.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಪರೀಕ್ಷಾ ಕೇಂದ್ರದಲ್ಲಿ ಮಕ್ಕಳಿಗಿಂತ ಪೋಷಕರೇ ಹೆಚ್ಚು ಆತಂಕ ಪಡಲು ಕಾರಣವೇನು?

ಫೇಲಾದರೆ ಮತ್ತೆ ಅದೇ ಕ್ಲಾಸಿಗೆ ಅಷ್ಟೇ ಫೀಸ್ ಹೊಂದಿಸಬೇಕಾದ್ದು ಅವರೇ ಅಲ್ಲವೆ!

ಕಾಳೀಹುಂಡಿ ಶಿವಕುಮಾರ್, ಮೈಸೂರು

'ಬಹುಮಾನಿತ ಪ್ರಶ್ನೆ' ಹೋಗಿ ಈಗ 'ವಾರದ ಪ್ರಶ್ನೆ' ಆದದ್ದು ಏಕೆ ರಾಮ್‌ಜೀ?

'ಬಹುಮಾನಿತ ಪ್ರಶ್ನೆ' ಲಕ್ಷ್ಮಿ; 'ವಾರದ ಪ್ರಶ್ನೆ' ಸರಸ್ವತಿ. 'ಸುಧಾ'ಕರರಿಗೆ ಸರಸ್ವತಿಯೇ ಹೆಚ್ಚು ಪ್ರಿಯಳೆಂದು.

ಅನಸೂಯ ಟಿ, ಕೇದಿಗೆಮನೆ

ಹೊಟ್ಟೆಯ ಕಿಚ್ಚಿಗೂ ಒಲೆಯ ಕಿಚ್ಚಿಗೂ ಏನು ವ್ಯತ್ಯಾಸ?

ಒಲೆಯ ಕಿಚ್ಚಿನಿಂದ ಹಾಲು ಉಕ್ಕುತ್ತದೆ, ಹೊಟ್ಟೆಯ ಕಿಚ್ಚಿನಿಂದ ಹಾಳು ಸುರಿಯುತ್ತದೆ.

ಬಿ.ವಿ. ಸುರೇಶ್, ಬೆಂಗಳೂರು

ಮಗ–ಸೊಸೆ ಬೇರೆ ಹೋದರೆ ಬೇಜಾರು. ಮಗಳು–ಅಳಿಯನೊಡನೆ ಬೇರೆ ಬಂದರೆ ಸಂತೋಷ. ಏಕೆ?

ಏಕೆಂದರೆ ಮೇಲೆ ಮೇಲೆ ಎಷ್ಟೇ ಹೇಳಿದರೂ ಮನದಲ್ಲಿ ಸೊಸೆಯನ್ನು ನಾವು ಮಗಳಂತೆ ಕಾಣುವುದೇ ಇಲ್ಲ.

ರಮಾನಂದ ಶರ್ಮಾ, ಬೆಂಗಳೂರು

ಈ ದೇಶದಲ್ಲಿ ಹೆಣ್ಣಿಗೆ ತಾಯಿಯ ಗರ್ಭ ಮತ್ತು ಸಮಾಧಿ ಇವೆರಡೇ ಸುರಕ್ಷಿತ ಸ್ಥಳವಂತೆ?

ನೀವೂ ನಿಮ್ಮ ಅಕ್ಕತಂಗಿಯರು, ಅಕ್ಕಪಕ್ಕದವರಿಗೆ ಅಪಾಯಕಾರಿಯೇ? ಜಗದಲ್ಲಿ ಇನ್ನೂ ಒಳಿತಿದೆ ಸರ್.

ಹರಿತಸ, ಬೆಂಗಳೂರು

ಪ್ರಶಸ್ತಿಗಳನ್ನು ಹೊಡೆದುಕೊಂಡು ಬರುವುದಕ್ಕೂ ಪಡೆದುಕೊಂಡು ಬರುವುದಕ್ಕೂ ವ್ಯತ್ಯಾಸವೇನು?

ಹೊಡೆದುಕೊಳ್ಳಲು ಅನೇಕ ಸಾಧನಗಳು ಬೇಕು. ಪಡೆದುಕೊಳ್ಳಲು ಸಾಧನೆ ಒಂದೇ ಸಾಕು.

ಪ್ರತಿಭಾ ಟಿ.ಎಸ್. ಊರಿಲ್ಲ

ಜನ ಸಂಪಾದನೆ, ಧನ ಸಂಪಾದನೆ; ಇವೆರಡರಲ್ಲಿ ನಿಮ್ಮ ಮತ?

ಧನ ಕೇಳದಂತಹ ವ್ಯಕ್ತಿಗಳ ಸಂಪಾದನೆ.

## ವಾರದ ಪ್ರಶ್ನೆ

ಎಸ್.ಸಿ. ರಮೇಶ್, ಮೈಸೂರು

ಒಬ್ಬ ಸಮಾಜ ಕಂಟಕನಿಗೆ ಮಠಾಧೀಶರು ಆಶೀರ್ವಾದ ಮಾಡುವುದು ಏನನ್ನು ಸೂಚಿಸುತ್ತದೆ?

ಆಶೀರ್ವಾದ ಮಾರಾಟಕ್ಕಿದೆ ಎಂದು.

ಬಿ.ಎಸ್. ನಾರಾಯಣಸ್ವಾಮಿ, ಬಿ.ಹೊಸಹಳ್ಳಿ

ತಪಸ್ಸು ಮಾಡಲು ಹೊರಟಿರುವೆ. ದಯಮಾಡಿ ಮೇನಕೆಯನ್ನು ಕಳುಹಿಸುವಿರಾ?

ಆ ವೃದ್ಧೆಗೆ ಆರ್ಥ್ರೈಟಿಸ್ಸೋ ಆಸ್ಟಿಯೋಪೋರೋಸಿಸ್ಸೋ ಆಗಿ ನರ್ತಿಸಲಾಗದಂತೆ. ಕಳುಹಿಸಲೆ?

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು

'ಪ್ರಕೃತಿ'ಯಲ್ಲಿ ಒಂದು ಅಕ್ಷರ ಮಾಯವಾದರೆ ಪ್ರಕೃತಿಗೆ ಒದಗುವ ಅಪಾಯ ಏನು?

ಪ್ರಕೃತಿಯ ಪ್ರತಿ ಕೃತಿಯೂ ಹಾಳಾಗಿ ಪ್ರತಿಕೃತಿಗಳಷ್ಟೇ ಉಳಿಯುತ್ತವೆ.

ಅಂಚೆ ಸುಬ್ರಹ್ಮಣ್ಯ, ಊರಿಲ್ಲ

ಮೊಬೈಲ್‌ಗೆ ರೀಚಾರ್ಜ್ ಇರುವಂತೆ ವಯಸ್ಸಿಗೆ ರೀಚಾರ್ಜ್ ಇದ್ದಿದ್ದರೆ ಯಾವ ದರ ಇರುತ್ತಿತ್ತು?



ಅನಾದರ.

ಟಿ. ಜಾಗೃತ್, ತುಮಕೂರು

ಕೆಲಸ ನಿಧಾನವಾಗಿ ಮಾಡಿದರೆ ನನ್ನ ತಾತ 'ಹೊಟ್ಟೆ ತುಂಬಿದ ಮನುಷ್ಯ' ಅಂತ ಬೈತಾರೆ. ಹಾಗಂದ್ರೆ ಏನು ಅಂಕಲ್?

ತಿನ್ನುವುದಕ್ಕೆ ಮುಂಚಿನ ಚುರುಕು ನಂತರ ಗೋಗರೆದರೂ ಕಾಣೆಸಲ್ಲ ಅಂತ.

ಮಧುಮತಿ ಅಭಿಷೇಕ್, ಬೆಂಗಳೂರು

ಗಾಳಿಪಟಕ್ಕೂ ಧೂಳಿಪಟಕ್ಕೂ ಇರುವ ವ್ಯತ್ಯಾಸವೇನು?

ಸೂತ್ರ ಕಟ್ಟಿದರೆ ಗಾಳೀಪಟ; ಸೂತ್ರ ಹರಿದರೆ ಧೂಳಿಪಟ.

■ ರಾಮ್

ನೀವೂ ಪ್ರಶ್ನೆ ಕಳಿಸಿ: editorsu@sudha.co.in